ಪ್ರಬಂಧ

# ಅಳಿಸುಳಿಗಳು





**ಕೆ.ಎಲ್. ಶ್ರೀವತ್ಸ**

ಕಲೆ: ಗುಜ್ಜಾರ್

ಇತ್ತೀಚೆಗೆ ಸಮಾರಂಭವೊಂದರಲ್ಲಿ ಜ್ಞಾನಾರ್ಜನೆಗೆ ಅಧಿದೇವತೆಯಾದ ಸರಸ್ವತಿಯನ್ನು ಆರಾಧಿಸುತ್ತ, ಮರಳಿನ ಮೇಲೆ ಬೀಜಾಕ್ಷರವನ್ನು ತಿದ್ದಿಸುವ ಮೂಲಕ ಅಕ್ಷರಾಭ್ಯಾಸ ಆರಂಭಿಸಿದ ವಿಶೇಷ ದೃಶ್ಯ, ನಮ್ಮ ಶಿಕ್ಷಣ ಪದ್ಧತಿಯ ಬೆಳವಣಿಗೆಯನ್ನು ಇನ್ನೊಮ್ಮೆ ಓದಿ, ಅವಲೋಕಿಸುವಂತೆ ಪ್ರೇರೇಪಿಸಿತ್ತು. ಕಾಗದ, ಮಸಿ ಇವುಗಳ ಹಂಗಿಲ್ಲದೆ ಹೀಗೆ ತಿದ್ದಿಸಿ, ತೀಡಿಸಿ ಅಕ್ಷರ ಕಲಿಕೆಯಿಂದ ಮೊದಲಾಗುವ ಶಿಕ್ಷಣ ಕ್ರಮ, ತನ್ನೊಳಗೆ ಮಗ್ಗಿ, ಸಂಖ್ಯಾ ಪಠಣ, ಸಂಕಲನ, ವ್ಯವಕಲನ, ಪುರಾಣ ವಾಚನ, ಕಥನ, ಕಾವ್ಯ, ಗಾಯನ, ಯುದ್ಧಕಲೆ, ಪುನರಾವರ್ತನೆ,. ಹೀಗೆ ಹತ್ತು ಹಲವಾರು ಸಾರಸ್ವತ ಸತ್ವಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ ಹಿಗ್ಗಿದ ಬಗೆಯನ್ನು ನಾಲ್ಕಾರು ಮೂಲಗಳಿಂದ ತಿಳಿದುಕೊಳ್ಳುವಂತಾಯಿತು. ಆದರೆ ಇವೆಲ್ಲ ಪರಿಕರಗಳ ಮಧ್ಯೆ ಮರಳಿನ ಮೇಲೆ ಬರೆಸಿ, ಅಳಿಸಿ, ಮತ್ತೆ ಬರೆಸಿ ಅಕ್ಷರಗಳನ್ನು ಬಿತ್ತುವ ಪ್ರಕ್ರಿಯೆ ಸಾಕಷ್ಟು ಗಮನ ಸೆಳೆಯಿತು ಮತ್ತು ಈ 'ಅಳಿಸುವುದರ' ಬಗ್ಗೆ ಕುತೂಹಲ ಹೆಚ್ಚಿಸಿತು.

ಹೀಗೆ ಆಸಕ್ತಿ ಕೆರಳಿಸಿದ 'ಅಳಿಸು' ಎನ್ನುವ ಪದದ ನಿಷ್ಪತ್ತಿಯ ಬಗ್ಗೆ ಹುಡುಕಿದಾಗ ದೊರೆತದ್ದು ಇಷ್ಟು. 'ಅಳಿಯು' ಎನ್ನಬಹುದಾದ ಮೂಲಧಾತುವಿನ ಪ್ರೇರಣಾತ್ಮಕ ಪದ 'ಅಳಿ-ಸು' ಆಗಿದೆಯೆಂದು. ಅಂದರೆ, ಇದ್ದದ್ದನ್ನು ಇಲ್ಲವಾಗಿಸುವಂತೆ, ನಾಶವಾಗುವಂತೆ ಮಾಡುವ ಕ್ರಿಯೆ 'ಅಳಿಸು' ಎನ್ನುವುದಾಗಿದೆ ಎಂದು ಸಾಮಾನ್ಯ ಅರ್ಥ ಹೇಳಿಬಿಡಬಹುದು. ಆದರೆ ಹೀಗೆ ಅಳಿಸುವುದರ ಹಿಂದೆ-ಮುಂದೆ ಅದೆಷ್ಟೋ ಚೇತೋಹಾರಿ ಸಂಗತಿಗಳು ಇರುವುದನ್ನು ಅನೇಕ ಪ್ರಾಜ್ಞರು ಗುರುತಿಸಿದ್ದಾರೆ.

ವಿದ್ವಾಂಸರು ತಾವು ಕಲಿತದ್ದನ್ನು ಇತರರಿಗೆ ಕಲಿಸುವುದು ಅತ್ಯಂತ ಪೂಜ್ಯವೆಂದು ಭಾವಿಸಿದ್ದ ಆ ಕಾಲದಲ್ಲಿ, ಸರ್ವಜ್ಞ ಹೇಳುವ ಹಾಗೆ ಗುರುವಿನ ಬಳಿ ಎತ್ತಾಗಿ, ತೊತ್ತಾಗಿ, ಅವನ ಕಾಲಿನ ಒತ್ತಾಗಿಯಾದರೂ ಕಲಿಯಬೇಕೆಂಬ ಆದರ್ಶ ಇಟ್ಟುಕೊಂಡ ಶಿಷ್ಯವೃಂದವೂ ಇತ್ತು. ಇಂತಹ ಗುರು-ಶಿಷ್ಯ ಪರಂಪರೆಯಲ್ಲಿ ಒದಗಿಬಂದ ಅಪಾರ ಸಾಹಿತ್ಯ ಸಂಪದದ ಹಿನ್ನೆಲೆಯಲ್ಲಿ -ಅವರೆಲ್ಲರೂ ಬಹುಶಃ ವಿಷಯಗಳನ್ನು ಕಲಿತದ್ದು, ಕರಗತ ಮಾಡಿಕೊಂಡದ್ದು ಹೀಗೆ ಬರೆದು, ಅಳಿಸಿ, ಮತ್ತೆ ಮತ್ತೆ ಬರೆದು, ತಿದ್ದಿಕೊಳ್ಳುತ್ತಾ ಎಂತಲೇ ಭಾವಿಸಬೇಕು.